ದಿನಾಂಕಃ **16-12-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ,</u>**

1) ನಾನು ಈ ದಾವೆಯನ್ನು ನನ್ನ ಚಿಕ್ಕಪ್ಪನ ಮಗ ಹಾಗೂ ಮಗಳ ವಿರುದ್ಧ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ನನ್ನ ಮಗಳು. 2 ನೇ ಪ್ರತಿವಾದಿ ನನ್ನ ಚಿಕ್ಕಪ್ಪನ ಮಗ. ದಾವಾ ಸ್ವತ್ತುಗಳು ಮೂಲತಹ ನನ್ನ ತಂದೆಗೆ ಸೇರಿದ್ದು. ನನ್ನ ತಂದೆ ಹೆಸರು ಚೌಡನಾಯಕ. ನನ್ನ ತಂದೆಗೆ ಒಬ್ಬರೇ ಹೆಂಡತಿ. ನನ್ನ ತಂದೆಗೆ ನಿಂಗಮ್ಮ ಮತ್ತು ಕಾಳಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ನಾನು ನಿಂಗಮ್ಮಳ ಮಗಳಾಗಿದ್ದರೂ ಸಹ ಕಾಳಮ್ಮಳ ಮಗಳು ಎಂದು ಸುಳ್ಳು ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಹಿರಿಯ ಮಗಳು. ನನ್ನ ತಂದೆಗೆ ನಾವು ಇಬ್ಬರು ಮಕ್ಕಳು.

(ಸಾಕ್ಷಿಯು ಈ ಹಂತದಲ್ಲಿ ಸರಿಯಾಗಿ ಉತ್ತರಿಸದ ಕಾರಣ ಪಾಟೀ ಸವಾಲಿಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ